**ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.ಇವರು ನಿಯಮ-72 ರಡಿ ಮಂಡಿಸಿರುವ ಪ್ರಸ್ತಾಪಕ್ಕೆ ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರ ಉತ್ತರ**

*****

**"ಪ್ರಾಯೋಜಕತ್ವ" ಯೋಜನೆಯಡಿ ಪಾಲನೆ-ಪೋಷಣೆ ಕಾಣುತ್ತಿರುವ ರಾಜ್ಯದ ಸುಮಾರು 26,334 ಮಕ್ಕಳಿಗೆ ಕಳೆದ 7 ತಿಂಗಳಿನಿಂದ ಮಾಸಾಶನ ಬಾರದೆ ಇರುವುದರಿಂದ, ದಿಕ್ಕಿಲ್ಲದ ಆ ಮಕ್ಕಳು ಅನ್ನ-ಆಸರೆ ಇಲ್ಲದೆ ಸಂಕಷ್ಟಕ್ಕೆ ಸಿಲುಕಿದ್ದಾರೆ, ಕುಷ್ಠಪೀಡಿತ ಮಕ್ಕಳು, ಅನಾಥರು, ಜೈಲು ಶಿಕ್ಷೆಗೆ ಗುರಿಯಾದವರ ಕಂದಮ್ಮಗಳು, ಕೋವಿಡ್‌ನಿಂದ ತಂದೆ ಅಥವಾ ತಾಯಿ ಕಳೆದುಕೊಂಡು ಏಕಪಾಲಕರಾದ ಮಕ್ಕಳ ಶಿಕ್ಷಣ, ಪೌಷ್ಠಿಕ ಆಹಾರ, ಟ್ಯೂಷನ್ ಭತ್ಯೆ ಮತ್ತಿತರ ಖರ್ಚಿಗೆ ಈ ಮಾಸಾಶನವನ್ನೆ ನಂಬಿದ್ದು ಆ ಮಕ್ಕಳಿಗೆ ಸಕಾಲದಲ್ಲಿ ಮಾಸಾಶನ ನೀಡದೆ ಅವರನ್ನು ದಾರುಣ ಪರಿಸ್ಥಿತಿಗೆ ದೂಡಲಾಗಿದೆ.**

**"ಪ್ರಾಯೋಜಕತ್ವ" ಯೋಜನೆಯಡಿ ನೋಂದಣಿಯಾಗಿರುವ ಫಲಾನುಭವಿಗಳಿಗೆ ಸಕಾಲದಲ್ಲಿ ಮಾಸಾಶನ ಪಾವತಿ ಮಾಡದೆ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು.**

**ಉತ್ತರ**

"ಪ್ರಾಯೋಜಕತ್ವ" ಯೋಜನೆಯು ಕೇಂದ್ರಪುರಸ್ಕೃತ ಕಾರ್ಯಕ್ರಮವಾಗಿದ್ದು, ಕೇಂದ್ರ ಸರ್ಕಾರದಿಂದ ಶೇಕಡ 60% ಹಾಗೂ ರಾಜ್ಯ ಸರ್ಕಾರದಿಂದ ಶೇಕಡ 40% ಅನುಪಾತದಲ್ಲಿ ವಿಸ್ತೃತ ಕುಟುಂಬಗಳ ಆರೈಕೆಯಲ್ಲಿರುವ ಅನಾಥ ಮತ್ತು ದುರ್ಬಲ ಕುಟುಂಬಗಳ ಏಕಪೋಷಕ ಮಕ್ಕಳಿಗೆ ತಮ್ಮ ಕುಟುಂಬದಲ್ಲಿಯೇ ಉಳಿದು ಬೆಳೆಯಲು ಆರ್ಥಿಕ ಬೆಂಬಲವನ್ನು ನೀಡಲು ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತದೆ.

2025-26 ನೇ ಸಾಲಿನ ಪ್ರಥಮ ತ್ರೈಮಾಸಿಕ ಅವಧಿಗೆ 19998 ಫಲಾನುಭವಿಗಳಿಗೆ DBT ಮೂಲಕ ಮಾಹೆಯಾನ ರೂ.4000/-ದಂತೆ ಏಪ್ರಿಲ್ 2025 ರಿಂದ ಜೂನ್ 2025 ವರೆಗೆ ಫಲಾನುಭವಿಗಳ ಖಾತೆಗೆ ನೇರವಾಗಿ ಬಿಡುಗಡೆಗೊಳಿಸಲಾಗಿರುತ್ತದೆ.

2025-26ನೇ ಸಾಲಿಗೆ ರಾಜ್ಯದಿಂದ 50000 ಫಲಾನುಭವಿಗಳಿಗೆ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಆದರೆ ಕೇಂದ್ರ ಸರ್ಕಾರವು ದಿನಾಂಕ:01-01-2026 ರಂದು ರಾಜ್ಯಕ್ಕೆ 18,673 ಫಲಾನುಭವಿಗಳಿಗೆ ಮಾತ್ರ ಅನುಮೋದನೆ ನೀಡಿ ಪ್ರಥಮ ಕಂತಿನ ಅನುದಾನ ಶೇ 60% ರೂ.32 ಕೋಟಿಗಳ ಅನುದಾನ (Mother Sanction)SNA SPARSH model ನಲ್ಲಿ ಬಿಡುಗಡೆಗೊಳಿಸಿರುತ್ತದೆ. ಅದಕ್ಕೆ ಅನುಗುಣವಾಗಿ ರಾಜ್ಯ ಸರ್ಕಾರವು ಶೇ 40% ಪಾಲು ರೂ.21 ಕೋಟಿಗಳನ್ನು ಸೇರಿ ಒಟ್ಟು ರೂ.53 ಕೋಟಿ ಅನುದಾನವನ್ನು ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಗೆ ಬಿಡುಗಡೆಗೊಳಿಸಿ ದಿನಾಂಕ: 27.02.2026 ರಂದು ಆದೇಶಿಸಿರುತ್ತದೆ.

ಈ ಹಿಂದೆ ಈ ಯೋಜನೆಯನ್ನು SNA-PFMS-DBT model ನಲ್ಲಿ ಅನುಷ್ಠಾನಗೊಳಿಸಲಾಗುತ್ತಿತ್ತು. ಪ್ರಸ್ತುತ SNA SPARSH model ನಲ್ಲಿ ಅನುಷ್ಠಾನಗೊಳಿಸಬೇಕಾಗಿರುವುದರಿಂದ SNA SPARSH, On board ಮಾಡುವ ತಾಂತ್ರಿಕ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಅಂತಿಮ ಹಂತದಲ್ಲಿ ಇರುತ್ತದೆ. ಸುಮಾರು 18000 ಫಲಾನುಭವಿಗಳಿಗೆ ಜುಲೈ 2025ರಿಂದ ಫೆಬ್ರುವರಿ 2026ರವರೆಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ DBT ತಂತ್ರಾಂಶದಲ್ಲಿ ಅನುಮೋದನೆ ನೀಡಿ ಹಣಪಾವತಿಗೆ ಸಲ್ಲಿಸಿರುತ್ತಾರೆ. SNA SPARSH mode ನಲ್ಲಿ ಹಣ ಪಾವತಿಗೆ ಖಜಾನೆಗೆ ಸಲ್ಲಿಸಲಾಗಿದ್ದು, ತಾಂತ್ರಿಕ ಸಮಸ್ಯೆಗಳಿಂದ ಪಾವತಿಗೆ ಬಾಕಿ ಇರುತ್ತದೆ. NMC ವತಿಯಿಂದ ತಾಂತ್ರಿಕ ಸಮಸ್ಯೆಯನ್ನು ಪರಿಶೀಲಿಸಲಾಗುತ್ತಿದೆ.

ಕೇಂದ್ರ ಸರ್ಕಾರವು ಪ್ರಾಯೋಜಕತ್ವ ಯೋಜನೆಯ ಶೇ.60% ಅನುದಾನವನ್ನು SNA SPARSH ಹೊಸ ತಂತ್ರಾಂಶದಲ್ಲಿ ಜನವರಿ-2026ರಲ್ಲಷ್ಟೇ ಬಿಡುಗಡೆಮಾಡಿರುತ್ತದೆ. ಹೊಸ ತಂತ್ರಾಂಶಕ್ಕೆ ವರ್ಗಾವಣೆಗೊಳ್ಳುವ ಪ್ರಕ್ರಿಯೆಯು ಅನೇಕ ಹಂತಗಳನ್ನು ಹೊಂದಿದ್ದು, ಮತ್ತು ತಾಂತ್ರಿಕ ಅಡಚಣೆಗಳ ಕಾರಣಗಳಿಂದಾಗಿ ಅನುದಾನ ಬಿಡುಗಡೆ ವಿಳಂಬವಾಗಿರುತ್ತದೆ. ಇನ್ನೂ ಹಲವು ರಾಜ್ಯಗಳಲ್ಲಿ ಇದೇ ರೀತಿಯ ತಾಂತ್ರಿಕ ಕಾರಣಗಳಿಂದಾಗಿ ಫಲಾನುಭವಿಗಳಿಗೆ ಅನುದಾನ ಬಿಡುಗಡೆಯಾಗಿರುವುದಿಲ್ಲ.

ರಾಜ್ಯದಲ್ಲಿ ಪ್ರಾಯೋಜಕತ್ವ ಯೋಜನೆಯಡಿ SNA SPARSH ಹೊಸ ತಂತ್ರಾಂಶದಡಿ ಅನುದಾನ ಬಿಡುಗಡೆ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ತಾಂತ್ರಿಕ ಸಮಸ್ಯೆ ಬಗೆ ಹರಿದಕೂಡಲೇ 2-3 ದಿನಗಳಲ್ಲಿ ಎಲ್ಲಾ ಫಲಾನುಭವಿಗಳಿಗೂ ಬಾಕಿ ಅನುದಾನವನ್ನು ಬಿಡುಗಡೆಗೊಳಿಸಲು ಕ್ರಮವಹಿಸಲಾಗುವುದು.

**ಸಂಖ್ಯೆ: ಮಮಇ 68 ಮಭಾಬ 2026**

(ಲಕ್ಷ್ಮೀ ಆರ್. ಹೆಬ್ಬಾಳ್ಕರ್)
ಮಹಿಳಾ ಮತ್ತುಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರೀಕರ
ಸಬಲೀಕರಣ ಸಚಿವರು.

Scanned with OKEN Scanner